RA: 83/22
PW: 1

ಸಾಕ್ಷಿಯನ್ನು ದಿಃ 14-09-2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**1 ನೇ ಮಧ್ಯಂತರ ಅರ್ಜಿಯ ಮೇಲೆ ಸಾಕ್ಷಿಯ ಪಾಟೀ ಸವಾಲುಃ ಶ್ರೀ ಬಿ ಬಿ ಎಮ್ ವಕೀಲರಿಂದಃ**

ನನ್ನ ಮೂಲ ಉದ್ಯೋಗವು ಕುರಿ ಕಾಯುವುದು ಇರುತ್ತದೆ. ನಾನು ಕಳೆದ 20 ವರ್ಷಗಳಿಂದ ಕುರಿ ಕಾಯುತ್ತಾ ಇದ್ದೇನೆ. ಒ ಎಸ್ ನಂ. 130/2021 ರ ಬಗ್ಗೆ ನನಗೆ ಸವಿಸ್ತಾರವಾಗಿ ಮಾಹಿತಿ ಇರುತ್ತದೆ, ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದೆನು ಎಂದರೆ ನನಗೆ ಅಲ್ಲಿಯ ವಕೀಲರು ಸರಿಯಾಗಿ ಮಾಹಿತಿಯನ್ನು ಕೊಟ್ಟಿಲ್ಲ. ಒ ಎಸ್ ನಂ. 130/2021 ರಲ್ಲಿ ನಾನು ಹುಬ್ಬಳ್ಳಿಯ ಎಸ್ ಆರ್ ಚಿನ್ನಾಲ ವಕೀಲರನ್ನು ನೇಮಿಸಿಕೊಂಡಿದ್ದೆನು ಎಂದರೆ ಸರಿ. ಅವರು ದಾವೆಯಲ್ಲಿ ಹಲವಾರು ಬಾರಿ ಹಾಜರಾಗಿ ನನ್ನ ತರ್ಫೆ ಕೌಂಟರ್ ಕ್ಲೇಮನ್ನು ಸಲ್ಲಿಸಿದ್ದರು ಎಂದರೆ ಅವರು ನನಗೆ ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ. ನನ್ನ ತಕರಾರಿಗೆ ಹಾಗೂ ಕೌಂಟರ್ ಕ್ಲೇಮಕ್ಕೆ ಸಹಿಯನ್ನು ಮಾಡಿಲ್ಲ. ಹುಬ್ಬಳ್ಳಿಯ ಚಿನ್ನಾಲ ವಕೀಲರಿಗೆ ಭೇಟಿಯಾಗಿ ಮಾಹಿತಿಯನ್ನು ಕೊಟ್ಟಿರುತ್ತೇನೆ ಎಂದರೆ ಅವರು ನನಗೆ ಯಾವುದೇ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ವಕಾಲತಗೆ ಸಹಿ ಮಾಡಿರುತ್ತೇನೆ ಎಂದರೆ 2 ಬಾರಿ ನನ್ನ ಸಹಿಯನ್ನು ಪಡೆದಿದ್ದು, ನನಗೆ ಸರಿಯಾಗಿ ಯಾವುದೇ ಮಾಹಿತಿಯನ್ನು ಕೊಟ್ಟಿಲ್ಲ. ನಾನು ಮಾಹಿತಿಯನ್ನು ಕೊಟ್ಟ ಪ್ರಕಾರ ವಕೀಲರು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ನಾನು ಹಳ್ಳಿಯ ಮನುಷ್ಯ ನನಗೆ ಪಕ್ಕಾ ಮಾಹಿತಿಯನ್ನು ಕೊಟ್ಟಿಲ್ಲ. ನಾನು ಕುರಿ ಕಾಯುತ್ತಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. 1 ನೇ ಎದುರುದಾರಳು ಎಫ್ ಡಿ ಪಿಯನ್ನು ದಿವಾಣಿ ನ್ಯಾಯಾಲಯ ಗದಗದಲ್ಲಿ ಸಲ್ಲಿಸಿರುತ್ತಾರೆ, ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ನ್ಯಾಯಾಲಯದಿಂದ ನೋಟಿಸು ಬಂದಾಗ ನನಗೆ ಒ ಎಸ್ ನಂ. 130/2021 ಇತ್ಯರ್ಥವಾದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಚಿನ್ನಾಲ ವಕೀಲರಿಗೆ ನಾನು ಇದರ ಬಗ್ಗೆ ವಿಚಾರಿಸಿಲ್ಲ. ನನ್ನ ಬಳಿ ಫೋನ್ ಇರುವುದಿಲ್ಲ. ನಾನು ಬೆಳಿಗ್ಗೆ ಕುರಿ ಕಾಯಲು ಹೋಗಿ ಸಂಜೆ ಬರುತ್ತೇನೆ. ಕಾನೂನು ಪಂಡಿತರ ಹೆಸರು ಹೇಳಲು ಬರುವುದಿಲ್ಲ. ಒ ಎಸ್ ನಂ. 130/2021 ರಲ್ಲಿಯ

ಆದೇಶವಾದ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಇದ್ದರೂ ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕುರಿ ಕಾಯುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇದೆಯಾ ಎಂದರೆ ಈ ಹಂತದಲ್ಲಿ ಸದರಿ ಪ್ರಶ್ನೆಯು ಅಸಮಂಜಸವಾಗಿರುವುದರಿಂದ ಪ್ರಶ್ನೆ ತಡೆಹಾಕಲಾಯಿತು. ಒ ಎಸ್ ನಂ. 130/2021 ರಲ್ಲಿಯ ಆದ ರ್ದೇದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದು 1 ನೇ ಎದುರುದಾರಳಿಗೆ ಬೇಗ ಅಸ್ತಿಯನ್ನು ಕೊಡಬಾರದೆನ್ನುವ ಸುಳ್ಳು ಮೇಲ್ಮನವಿಯನ್ನು ಸಲ್ಲಿಸಿ. ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲುಃ ಎಮ್ ಎಮ್ ಬಿ ವಕೀಲರಿಂದಃ

ಎಮ್ ಎಮ್ ಬಿ ವಕೀಲರು ಬಿ ಬಿ ಎಮ್ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಗದಗ.